ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/3/ಎಲ್ಆರ್‌ಡಿಸಿ/2012-13 / 692

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 29/04/2013.

**ಸುತ್ತೋಲೆ**

ವಿಷಯ: ಕ್ರೀಡಾನಿಧಿಗೆ ವಂತಿಕೆಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂ: ಇಡಿ:119:ಟಿಪಿಇ:2005, ದಿ: 18-10-2005.
2. ಈ ಕಛೇರಿ ಸುತ್ತೋಲೆ ಸಂ: ಡಿಟಿಇ:151:ಎಸಿಎಂ(2):2004, ದಿ: 12-04-2006
3. ಈ ಕಛೇರಿ ಸುತ್ತೋಲೆ ಸಂ: ಡಿಟಿಇ:3:ಎಲ್ಆರ್‌ಡಿಸಿ:2012-13, ದಿ: 29-01-2013.

*********

ಉಲ್ಲೇಖ (1)ರಲ್ಲಿ ನಮೂದಿಸಿರುವ ಸರ್ಕಾರಿ ಆದೇಶದಲ್ಲಿ 2006-07ನೇ ಸಾಲಿನಿಂದ ಜಾರಿಗೆ ಬರುವಂತೆ ಪಾಲಿಟೆಕ್ನಿಕ್ ಶಿಕ್ಷಣದಲ್ಲಿ ಶುಲ್ಕವನ್ನು ಪರಿಷ್ಕರಿಸಲಾಗಿರುತ್ತದೆ. ಆ ಪೈಕಿ, ಇತರೆ ಶುಲ್ಕದಡಿಯಲ್ಲಿ ಕ್ರೀಡಾ ಶುಲ್ಕವಾಗಿ ರೂ.70.00ಗಳನ್ನು ಪ್ರತಿ ವಿದ್ಯಾರ್ಥಿಯಿಂದ ಪಡೆಯುತ್ತಿದ್ದು, ಸದರಿ ಹಣದಲ್ಲಿ ಪ್ರತಿ ವಿದ್ಯಾರ್ಥಿಗೆ ರೂ.10.00 ರಂತೆ ಕ್ರೀಡಾನಿಧಿಯನ್ನು ತೆಗೆದು ಕ್ರೂಢೀಕೃತ ಕ್ರೀಡಾನಿಧಿಯ ಮೊತ್ತವನ್ನು **ದಿ ಪಾಲಿಟೆಕ್ನಿಕ್ ಸ್ಪೋರ್ಟ್ಸ್ ಕಮಿಟಿ, ಬೆಂಗಳೂರು** ಇವರ ಹೆಸರಿಗೆ ಬೇಡಿಕೆ ಹುಂಡಿ ಪಡೆದು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಪ್ರತಿ ವರ್ಷ ನವೆಂಬರ್ 1 ರ ಒಳಗಾಗಿ ಕಳುಹಿಸುವಂತೆ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ ದಿ: 12-04-2006 ರಂದು ಉಲ್ಲೇಖ (2)ರ ಕಛೇರಿ ಸುತ್ತೋಲೆಯಲ್ಲಿ ಸೂಚಿಸಲಾಗಿದೆ. ಮತ್ತು ಉಲ್ಲೇಖ (3)ರ ಈ ಕಛೇರಿ ಸುತ್ತೋಲೆಯಲ್ಲಿ ಕ್ರೀಡಾನಿಧಿಗೆ ನೀಡಬೇಕಾದ ವಂತಿಕೆಯನ್ನು ಕೂಡಲೇ ಬೇಡಿಕೆ ಹುಂಡಿಗಳ (ಡಿ.ಡಿ.) ಮುಖಾಂತರ ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿತ್ತು.

ಪ್ರತಿ ವರ್ಷವು ಕ್ರೀಡಾ ವಂತಿಕೆಯನ್ನು ವಿದ್ಯಾರ್ಥಿಗಳಿಂದ ಪಡೆಯುತ್ತಿದ್ದು, ಸದರಿ ವಂತಿಕೆಯನ್ನು ಕೆಲವೇ ಪಾಲಿಟೆಕ್ನಿಕ್‌ಗಳು ಮಾತ್ರ ಪ್ರತಿ ವರ್ಷವು ಕ್ರೀಡಾನಿಧಿಗೆ ವಂತಿಕೆಯನ್ನು ಸಲ್ಲಿಸಿದ್ದು, ಇನ್ನೂ ಕೆಲವು ಪಾಲಿಟೆಕ್ನಿಕ್‌ಗಳು 2011-12 ಮತ್ತು 2012-13ನೇ ಸಾಲಿನ ವಂತಿಕೆಯನ್ನು ಮಾತ್ರ ಕಳುಹಿಸಿದ್ದು ಉಳಿದ ಪಾಲಿಟೆಕ್ನಿಕ್‌ಗಳು ಇಲ್ಲಿಯವರೆಗೂ ಸಹ ಕ್ರೀಡಾನಿಧಿಗೆ ವಂತಿಕೆ ಹಣವನ್ನು ಕಳುಹಿಸಿರುವುದಿಲ್ಲ. ಸರ್ಕಾರಿ ಆದೇಶದಲ್ಲಿ ಮತ್ತು ಈ ಕಛೇರಿ ಸುತ್ತೋಲೆಯಲ್ಲಿ ತಿಳಿಸಿದರೂ ಸಹ ಕ್ರೀಡಾನಿಧಿಗೆ ವಂತಿಕೆ ಹಣವನ್ನು ಸಲ್ಲಿಸದಿರುವ ವಿಷಯವನ್ನು ಬಹಳ ಗಂಭೀರವಾಗಿ ಪರಿಗಣಿಸಲಾಗಿದೆ. ಆದ ಪ್ರಯುಕ್ತ 2006-07 ರಿಂದ 2012-13ರ ವರೆಗೆ ಯಾವ ಯಾವ ವರ್ಷದ ವಂತಿಕೆಯನ್ನು ಸಲ್ಲಿಸಿಲ್ಲವೋ ಸದರಿ ವರ್ಷಗಳ ವಂತಿಕೆ ಹಣವನ್ನು **ಕಾರ್ಯದರ್ಶಿ, ದಿ ಪಾಲಿಟೆಕ್ನಿಕ್ ಸ್ಪೋರ್ಟ್ಸ್ ಕಮಿಟಿ, ಬೆಂಗಳೂರು** ಇವರ ಹೆಸರಿಗೆ ಬೇಡಿಕೆ ಹುಂಡಿಗಳ ಮುಖಾಂತರ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸಲು ಮತ್ತೊಮ್ಮೆ ಸೂಚಿಸಲಾಗಿದೆ.

......2

2006-07ನೇ ಸಾಲಿನಿಂದ 2012-13ನೇ ಸಾಲಿನವರೆಗೆ ಈ ಕಛೇರಿಗೆ ಸಲ್ಲಿಸಿರುವ ಕ್ರೀಡಾನಿಧಿಗೆ ಸಂಬಂಧಿಸಿದ ಬೇಡಿಕೆ ಹುಂಡಿಗಳ ವಿವರವಾದ ಮಾಹಿತಿಯನ್ನು ಈ ಕೆಳಕಂಡ ನಮೂನೆಯಲ್ಲಿ ನಮೂದಿಸಿ ಕಳುಹಿಸಲು ಸಹ ಸೂಚಿಸಿದೆ.

| ಕ್ರ ಸಂ. | ಆರ್ಥಿಕ ವರ್ಷ | ಬೇಡಿಕೆ ಹುಂಡಿ ಸಂಖ್ಯೆ | ಹುಂಡಿಯ ದಿನಾಂಕ | ಬೇಡಿಕೆ ಹುಂಡಿಯ ಮೊತ್ತ | ಸಂಸ್ಥೆಯ ಸಂಕೇತ/ಷರಾ |
|---|---|---|---|---|---|
| 1. | 2006-07 | | | | |
| 2. | 2007-08 | | | | |
| 3. | 2008-09 | | | | |
| 4. | 2009-10 | | | | |
| 5. | 2010-11 | | | | |
| 6. | 2011-12 | | | | |
| 7. | 2012-13 | | | | |

30/4/13
ಜಂಟಿ ನಿರ್ದೇಶಕರು(ಸಿಡಿಸಿ)

**ಇವರಿಗೆ:**

1. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ.
2. ಇ-ಆಡಳಿತ ವಿಭಾಗಕ್ಕೆ ಸೂಕ್ತ ಕ್ರಮಕ್ಕಾಗಿ.